ಸಹವಾಸ ಬೇಡವೆಂದೂ ನಾನು ಈಗಿರುವ ಹಾಗೆಯೇ ಇರುವೆನೆಂದೂ ಮತ್ತು ನೀವು ಗಳಿಸಿರುವ ಆಸ್ತಿಯನ್ನು ಮೋಜು ಮಾಡಿ ಹಾಳುಮಾಡುವ ಅಕಲಿನಿಂದ ಈತ ನನ್ನ ಮದುವೆ ಆಗಿರುವನೆಂದೂ ಹೇಳುತ್ತ ಡೈವೋರ್ಸ್ ಕೊಡುವುದಾಗಿ ಹೇಳುತ್ತಿದ್ದಳು. ಅರೇ! ಆಕೆ ಆ ಬೆತ್ತಲೆ ಹೆಂಗಸಿನ ವೃತ್ತಾಂತವನ್ನು ಹೇಳುತ್ತಿಲ್ಲ... ಬಹುಶಃ ಆಕೆಗೆ ಹೇಳಲಿಕ್ಕೆ ನಾಚಿಕೆ ಆಗುತ್ತಿರಬಹುದು.

ವಿಚ್ಛೇದನಕ್ಕೆ ಪಟ್ಟುಹಿಡಿದು ಕುಳಿತವಳನ್ನು ನೋಡಿ ವೈರಮುಡಿ ಕೊಂಚ ಗೆಲುವಾಗಿ ನಕ್ಕ. ವರ್ಷಾರುತಿಂಗಳ ಈ ಸರ್ಕಸ್ಸಿನಲ್ಲಿ ನಾನು ಉಂಡಿದ್ದು, ಆಕೆ ಪಡೆದದ್ದು ಏನೂ ಇರಲಿಲ್ಲವಾದರೂ ಆಕೆಯ ಮೊಂಡುತನದಿಂದಾಗಿ ತನಗೊಂದು ಬಿಡುಗಡೆಯ ಭಾಗ್ಯ ದೊರೆಯುತ್ತಿದೆ ಎಂದುಕೊಂಡ. ಹೀಗೆ ಉಟ್ಟಬಟ್ಟೆಯಲ್ಲಿ ದೇಶಾಂತರ ಹೊರಟು ಜಗತ್ತಿನ ಮೂಲೆಮೂಲೆಯನ್ನು ಅಲೆದಾಡಬೇಕೆಂದು ಮನದಲ್ಲಿ ಹೊಂಚು ಹಾಕುತ್ತಿದ್ದಾಗ ವಿನಿತಾ ಯಾಕೋ ಹೊಟ್ಟೆ ಹಿಡಕೊಂಡಿದೆ ಎನ್ನುತ್ತ ಅವರಪ್ಪನ ಭುಜಕ್ಕೊರಗಿದಳು... ಗೊತ್ತುಗುರಿಯಿಲ್ಲದೆ ಕೀಲಾರದಿಂದ ಹೊರಟು ಮಂಡ್ಯ, ಮೈಸೂರು, ಬೆಂಗಳೂರು, ಬೆಳಗಾವಿ ಧಾರವಾಡ ಎನ್ನುತ್ತ ಅಲೆದಾಗ ದೊರೆತ ಆ ಫಲಕ್ಕೆ ತನ್ನ ನಿರ್ಧಾರ ಬೇಡವೆನಿಸಿರಬೇಕು. ಈ ಸರ್ಕಸ್ಸಿನ ಯಾವ ಜಂಜಡವೂ ತಿಳಿಯದ ಆ ಮಾಂಸದ ಮುದ್ದೆ ತನ್ನನ್ನು ತಡೆದು ನಿಲ್ಲಿಸಿದೆ ಎಂದುಕೊಂಡರೂ ಅವಳ ಬಿಗುಮಾನ ಮುಕ್ಕಾದಂತೆ ತೋರಲಿಲ್ಲ.

ಬಹುಶಃ ಜನ ಆಡಿಕೊಂಡಾರು, ಆ ಮುದಿಯ ಪದುಮಾರ ಸಂಸಾರವೆಂಬುದು ಉಂಟಲ್ಲ ಅದು ಸುಮ್ಮನೆ ಗಂಡುಹೆಣ್ಣಿನ ನಡುವಿನ ಆಕರ್ಷಣೆಯಲ್ಲ ಮಾರಾಯ... ಆ ಹುಡುಗಿಯ ಚರಿತೆಯನ್ನು ಅವರಿವರ ಬಾಯಲ್ಲಿ ಕೇಳು ಮಾರಾಯ ಎಂದಿದ್ದವ ಈಗ ಮುರಿದು ಬೀಳುತ್ತಿರುವ ಗೋಪುರಕ್ಕೆ ತಾನೂ ಕಲ್ಲೆಸೆಯಬಹುದು. ಇಲ್ಲವೇ ನಿನ್ನಂಥವನಿಗೆ ಹೀಗಾಗುವುದೆಂದು ಭವಿಷ್ಯದ ಬಗ್ಗೆ ಆವತ್ತೇ ಹೇಳಿದ್ದೆನಲ್ಲವೋ! ಎನ್ನಬಹುದು. ಆದರೆ, ಆ ಎಳೆ ಕಂದಮ್ಮನಲ್ಲಿ ತನ್ನ ಜೀವಚೈತನ್ಯ ಇರುವುದರಿಂದ ವಿನಿತಾಳ ಹಟಮಾರಿತನದ ಎದುರು ಸೋತು ಸುಣ್ಣಾದ.

ಸಣ್ಣ ಹುಡುಗರಿದ್ದಾಗ ಆಡುತ್ತಿದ್ದ ಅವ್ವ ಅಪ್ಪನ ಆಟದಂತೆ ಇದಲ್ಲ! ಹುಡುಗಾಟವಲ್ಲ ಜೋಡೆತ್ತಿನ ಹೆಗಲಿಗೆ ನೊಗ ಕಟ್ಟುವ ನಾಗರಿಕ ತಿಳಿವಳಿಕೆ ಎಂಬುದು... ಕ್ಯಾನವಾಸಿನಲ್ಲಿ ತೀಡುತ್ತಿದ್ದ ಬಣ್ಣಗಳು ಅರ್ಥ ಹೊರಡಿಸುವಂತೆ ದಿನೆದಿನೆ ವಿನೀತಾಳ ಪ್ರೀತಿಯ ಆಳ ಅಂತಃಕರಣ ಅರಿವಾದಂತೆ ತೋರತೊಡಗಿತ್ತು. ಮೂರು ರಿಂಗಿನ ಸರ್ಕಸ್ ಮನೆಯಲ್ಲಿ ಹಾದು ಅಪ್ಪ ಎನ್ನುವ ಹಾತೊರೆಯುವ ಆ ಜೀವಕ್ಕಾಗಿ ಕಾಯತೊಡಗಿದ...

## ಮಹಾದೇವ ಹಡಪದ

ಹೆಗ್ಗೋಡಿನ ನೀನಾಸಂ ಪದವೀಧರರಾದ ಮಹಾದೇವರ ಊರು ಬೆಳಗಾವಿ ಜಿಲ್ಲೆಯ ರಾಮದುರ್ಗ. ಪ್ರಸ್ತುತ ಧಾರವಾಡದಲ್ಲಿ ವಾಸ. ನಾಟಕಗಳ ನಿರ್ದೇಶಕರಾಗಿ ಅವರು ಸುಮಾರು 20 ನಾಟಕಗಳ ನಿರ್ದೇಶನ ಮಾಡಿದ್ದಾರೆ. 'ಆಟ–ಮಾಟ' ಸಂಸ್ಥೆಯಿಂದ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಮಾಡಿರುವ ನಾಟಕಗಳ ಪ್ರದರ್ಶನಗಳು ಪ್ರೇಕ್ಷಕರ ಮೆಚ್ಚುಗೆ ಗಳಿಸಿವೆ. ದಶಕದಿಂದ ಕತೆಗಳನ್ನು ಬರೆಯುತ್ತ ಬಂದಿದ್ದಾರೆ.